ದಿನಾಂಕ: 14-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎಸ್.ಬಿ.ಎಚ್. ಪ್ರತಿವಾದಿ 1 ರಿಂದ 9 ರವರ ಪರ ವಕೀಲರಿಂದಃ**

21. ನನಗು ಮತ್ತು ಚೂಳಪ್ಪ ಇವರ ನಡುವೆ ಒಂದು ದಾಖಲೆ ಆಗಿರುತ್ತದೆ. ಸದರಿ ದಾಖಲೆ ಆಗುವಾಗ ನಾನು ಚೂಳಪ್ಪ ಇವರಿಗೆ ರೂ.70,000/- ದುಡ್ಡು ಕೊಟ್ಟಿರುತ್ತೇನೆ. ಈ ದಾವೆ ಹೂಡುವ ಪೂರ್ವದಲ್ಲಿ ನಾನು ಚೂಳಪ್ಪ ಇವರಿಗೆ ರೂ.70,000/- ಕೊಟ್ಟ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿ. ಚೂಳಪ್ಪ ಇವರಿಗೆ ನಾನು ರೂ.70,000/- ಕೊಟ್ಟ ಬಗ್ಗೆ ನಮ್ಮ ವಕೀಲರಿಗೆ ನಾನು ಮಾಹಿತಿ ಕೊಟ್ಟಿರುತ್ತೇನೆ. ಚೂಳಪ್ಪ ಇವರಿಗೆ ನಾನು ರೂ.70,000/- ಕೊಟ್ಟ ಬಗ್ಗೆ ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಿಸಿದ್ದೇನೆ.

22. ಚೂಳಪ್ಪನ ಆಸ್ತಿಯನ್ನು 2004ರಲ್ಲಿ ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ. ನಾನು ಹಾಜರಪಡಿಸಿರುವ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ನೋಡಿಕೊಂಡು ಹಾಜರ ಮಾಡಿದ್ದೇನೆ. ನಾನು ಹಾಜರಪಡಿಸಿರುವ ಸರ್ವೆ ನಂ.304/1 ರ 2004-05ರ ಪಹಣಿ ಪತ್ರಿಕೆ ನಿಪಿ-13ರಲ್ಲಿ ಚೂಳಪ್ಪನ ಹೆಸರು ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-13ರಲ್ಲಿ ಚೂಳಪ್ಪನ ಹೆಸರು ಇಲ್ಲದೇ ಇದ್ದುದ್ದರಿಂದ ಚೂಳಪ್ಪ ನನಗೆ ಹಕ್ಕು ಬಿಟ್ಟು ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ.

23. ನಾನು ಹಾಜರಪಡಿಸಿರುವ ನಿಪಿ-7ರಲ್ಲಿ ಚೂಳಪ್ಪನ ಹೆಸರು ದಾಖಲ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7ರಲ್ಲಿ ಸಿದ್ದಪ್ಪ ತಂದೆ ಭೀಮಪ್ಪ ಮುತ್ತೆಪ್ಪಗೋಳ ಮತ್ತು ನಿಂಗಪ್ಪ ತಂದೆ ಭೀಮಪ್ಪ ಮುತ್ತೆಪ್ಪಗೋಳ ಇವರಿಗೆ ಸರ್ವೆ ನಂ.304/1 ರ 04ಎ-01ಗು ಪೈಕಿ 02ಎ-00ಗು-08ಅಣೆ ಹಾಗೂ ಭಾಗವ್ವ ಸಣ್ಣಇಟ್ಟಪ್ಪ ಮುತ್ತೆಪ್ಪಗೋಳ, ಭೀಮಪ್ಪ ಸಿದ್ದಪ್ಪ ಮುತ್ತೆಪ್ಪಗೋಳ ಇವರಿಗೆ ಸರ್ವೆ ನಂ.304/1 ರ 04ಎ-01ಗು ಪೈಕಿ 02ಎ-00ಗು-08ಅಣೆ ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ದಾಖಲೆಗಳ ಆಧಾರದ ಮೇಲೆ ಎಂ.ಆರ್.ನಂ.444 ಮಂಜೂರಾಗಿದೆ ಎಂದರೆ ಸರಿ. ನಿಪಿ-7ರಲ್ಲಿ ಎಲ್ಲಿಯೂ ಸಹ ಚೂಳಪ್ಪನ ಹೆಸರು ದಾಖಲ ಇರುವುದಿಲ್ಲ ಎಂದರೆ ಸರಿಯಲ್ಲ. ಚೂಳಪ್ಪ ಇವರಿಗೆ ಗೊತ್ತಾಗದ ಹಾಗೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಚೂಳಪ್ಪ ಇವರು ನನಗೆ ಬರೆದುಕೊಟ್ಟ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ನನಗೆ ಹಾಜರ ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿದಾರರು ಅದನ್ನು ಹಾಜರಪಡಿಸಿದ್ದಾಗಿ ಹೇಳುತ್ತಾರೆ.

24. ಚೂಳಪ್ಪನ ವಾರಸದಾರರಾದ ಈ ದಾವೆಯ ಪ್ರತಿವಾದಿ 1 ರಿಂದ 9 ರವರು ದಾವಾ ಆಸ್ತಿಯನ್ನು ಪ್ರತಿವಾದಿ 10 ರವರಿಗೆ ರೂ.30,00,000/-ಕ್ಕೆ ಮಾರಾಟ ಮಾಡಲು ಒಪ್ಪಿ ದಿನಾಂಕ 30/06/2023ರಂದು ರೂ.15,00,000/- ಪಡೆದು ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನಮ್ಮ ಒಪ್ಪಿಗೆ ಇಲ್ಲದೇ ಹೇಗೆ ಕೊಟ್ಟಿದ್ದಾರೆ ಎಂದು ಕೇಳುತ್ತಾರೆ.

25. 10ನೇ ಪ್ರತಿವಾದಿ ದಿಃ 15/05/2025 ರಂದು ಪ್ರತಿವಾದಿ 1 ರಿಂದ 9 ರವರ ಕಡೆಯಿಂದ ನೋಂದಾದ ಖರೀದಿ ಪತರ ಬರೆಯಿಸಿಕೊಂಡಿದ್ದಾರೆ ಎಂದರೆ ತಮ್ಮ ಹೆಸರು ಇಲ್ಲದೇ ಖರೀದಿ ಪತ್ರ ಹೇಗಾಗುತ್ತದೆ ಎಂದು ಕೇಳುತ್ತಾರೆ. ಖರೀದಿ ಪತ್ರ ಆದ ದಿನವೇ ಪ್ರತಿವಾದಿ 1 ರಿಂದ 9 ರವರು ದಾವಾ ಆಸ್ತಿಯ ಕಬ್ಜೆಯನ್ನು 10ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಎಂ.ಆರ್.ನಂ.ಎಚ್-136/2024-25ರ ಪ್ರಕಾರ ದಾವಾ ಆಸ್ತಿಯ ಉತಾರದಲ್ಲಿ 10ನೇ ಪ್ರತಿವಾದಿಯ ಹೆಸರು ದಾಖಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಈಗ ಪ್ರತಿವಾದಿ 10 ರವರೇ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಎಂ.ಆರ್.ನಂ.ಎಚ್-136/2024-25ರ ವಿರುದ್ಧ ನಾನು ಯಾವುದೇ ಅಪೀಲು ಮಾಡಿಲ್ಲ. ದಾವಾ ಆಸ್ತಿಯಲ್ಲಿ ನಾನು ಕಬ್ಜೆಯಲ್ಲಿ ಇದ್ದೇನೆ ಎಂದು ತೋರಿಸಲು ನನ್ನ ಬಾಯಿ-ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ.

26. ಚೂಳಪ್ಪ ಇವರು ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಿರುವ ಹಕ್ಕು ಬಿಟ್ಟು ಕೊಟ್ಟ ಪತ್ರದಿಂದ ನನಗೆ ಯಾವುದೇ ಮಾಲ್ಕೀ ಹಕ್ಕು ಪ್ರಾಪ್ತಿ ಆಗುವುದಿಲ್ಲ ಎಂದರೆ ಸರಿಯಲ್ಲ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆದ ಆದೇಶದ ದುರುಪಯೋಗಪಡಿಸಿಕೊಂಡು ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ಪಡೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಮಾಲ್ಕೀ ಹಕ್ಕು ಹಾಗೂ ಹಿತಾಸಕ್ತಿ ಇಲ್ಲದೇ ಇದ್ದರೂ ಸಹ

ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

27. ಬೈಲಹೊಂಗಲದ ಸಹಾಯಕ ಆಯುಕ್ತರ ಕಚೇರಿಯಲ್ಲಿ ಪ್ರಕರಣ ನಡೆದಾಗ ನನ್ನ ಪರವಾಗಿ ಎಸ್.ಪಿ.ರೊಟ್ಟಿ ವಕೀಲರು ಇದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಮ್ಮ ವಕೀಲರು ಲಿಖಿತ ವಾದ ಸಲ್ಲಿಸಿರುತ್ತಾರೆ ಎಂದರೆ ಸರಿ. ಲಿಖಿತ ವಾದ ತಯಾರ ಮಾಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಲಿಖಿತ ವಾದದ 4ನೇ ಖಂಡಿಕೆಯಲ್ಲಿ ಚೋಳಪ್ಪ ಇವರು ಕೈಗಡ ಸಾಲವನ್ನು ಮರುಪಾವತಿಸುವ ಉದ್ದೇಶದಿಂದ ಸರ್ವೆ ನಂ.304 ರಲ್ಲಿಯ 01ಎಕರೆ ಜಮೀನು ನನಗೆ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದುಕೊಟ್ಟಿದ್ದಾರೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ.

28. ಚೋಳಪ್ಪ ಇವರು ಯಾರು ಯಾರು ಕಡೆಯಿಂದ ಎಷ್ಟೆಷ್ಟು ಸಾಲ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಚೋಳಪ್ಪ ಇವರು ನನಗೆ ಸಾಲ ಆಗಿದೆ ಹೊಲ ತಗೋಳಿ ಎಂದಿದ್ದಕ್ಕೆ ನಾನು ಚೋಳಪ್ಪ ಇವರ ಹೊಲ ತೆಗೆದುಕೊಂಡಿದ್ದೇನೆ. ಲಿಖಿತ ವಾದದಲ್ಲಿ ಚೋಳಪ್ಪ ಇವರೇ ತಮಗೆ ಕೈಗಡ ಸಾಲವಾಗಿದೆ ಎಂದು ಹೇಳಿ ಬರೆಯಿಸಿರುತ್ತಾರೆ. ಈ ದಾವೆ ಹೂಡುವ ಸಮಯದಲ್ಲಿ ಚೋಳಪ್ಪ ಇವರು ಸಾಲ ಮಾಡಿದ್ದಾರೆ ಎಂದು ಮಾಹಿತಿ ನನಗೆ ಇತ್ತು ಎಂದರೆ ಸರಿ. ಸದರಿ ಮಾಹಿತಿಯನ್ನು ನಮ್ಮ ವಕೀಲರಿಗೆ ಹೇಳಿ ವಾದ ಪತ್ರದಲ್ಲಿ ಬರೆಯಿಸಿದ್ದೇನೆ.

29. ನನ್ನ ವಾದ ಪತ್ರದ 4ನೇ ಖಂಡಿಕೆಯಲ್ಲಿ ಹೇಳಿರುವ ವಿಷಯ ಸರಿ ಇರುತ್ತದೆ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ವಿ.ಎ.ಎಚ್. 10ನೇ ಪ್ರತಿವಾದಿ ಪರ ವಕೀಲರಿಂದಃ**

ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ